ಪರಿಶಿಷ್ಟ ಬಿ.

ದೇಹವು ದೃಢವಾಗಿರುವ ಒಗ್ಗೆ ಕೊಡುವ ಸರ್ಟಿಫಿಕೇಟಿನ ನಮೂನೆ.

.....ನ್ನು ನಾನು ಪರೀಕ್ಷಿಸಿರುತ್ತೇನೆಂದೂ, ಎಗ್ಸಿಕ್ಯೂಟಿವ್ ಯಾ ಕಾರ್ಯನಿರ್ವಾಹಕ ಅಧಿಕಾರಿಯ ಚಟುವಟಿಕೆಯಾದ ಕೆಲಸಗಳನ್ನು ಮಾಡುವುದಕ್ಕೆ ಆತನನ್ನು ಅಯೋಗ್ಯನನ್ನಾಗಿ ಮಾಡುವ ಯಾವ ಜಾಡ್ಯವನ್ನಾಗಲಿ, ದೇಹದೊಡನೆ ಹುಟ್ಟಿ ಬಂದ ಜಾಡ್ಯವನ್ನಾಗಲಿ, ಅಶಕ್ತಿಯನ್ನಾಗಲಿ ಕಾಣಲಿಲ್ಲವೆಂದೂ ನಾನು ಇದರಿಂದ ಸರ್ಟಿಫೈ ಮಾಡುತ್ತೇನೆ. ಆತನಿಗೆ ಒಳ್ಳೆಯ ದೃಢವಾದ ದೇಹವಿರುವುದಾಗಿ ನಾನು ಎಣಿಸುತ್ತೇನೆ.

ದಸ್ತಖತು .....

ಉದ್ಯೋಗದ ಹೆಸರು, ಮತ್ತು ವಿಳಾಸ .....

ತಾರೀಖು.....

ತಾರೀಖು 10ನೆ ಜುಲೈ 1907.

ನಂ. 280—ಸ್ಯಾನಿಟೆರಿ (15-06)—17, ಸಮಸ್ತ ಜನರ ತಿಳಿವಳಿಕೆಯ ಒಗ್ಗೆ ಇದರಿಂದ ಪ್ರಸಿದ್ಧಪಡಿಸುವದೇನಂದರೆ :— ಮೈಸೂರು ಡಿಸ್ಟ್ರಿಕ್ಟಿನಲ್ಲಿ ಪ್ಲೇಗು ತಗುಲಿದ ಪ್ರದೇಶಗಳೆಂದು ಆಗಿಂದಾಗ ಪ್ರಕಟಿಸಲ್ಪಟ್ಟಿರ್ದ ಈ ಕೆಳಗೆ ನಮೂದಿಸಿರುವ ಸ್ಥಳಗಳು ಎರಡು ತಿಂಗಳಿಗೆ ಮೇಲಾರಿ ಜಾಡ್ಯರಹಿತವಾಗಿದ್ದುದರಿಂದ ಅಂಥಾ ಪ್ಲೇಗು ತಗುಲಿದ ಪ್ರದೇಶಗಳ ಪಟ್ಟಿಯಿಂದ ವಜಾ ಮಾಡಲ್ಪಟ್ಟಿವೆ.

ಸ್ಥಳ.	ತಾಲ್ಲೂಕು.
ಅನಗಲ್ಲಿ	ಮೈಸೂರು
ಗೋಪಾಲಪುರ	ಡಿಟೋ
ಉಂದವಾಡಿ	ಡಿಟೋ
ದೇವಗಲ್ಲಿ	ಡಿಟೋ
ಮಾದೇವರ ಕೊಪ್ಪಲು	ಡಿಟೋ
	ಡಿಟೋ
ಚಂಡಿಕೆರೆ	ಡಿಟೋ
ಹಂಚ	ಡಿಟೋ
ಕ್ಯಾತಚಾಯಿನಹಳ್ಳಿ	ಡಿಟೋ
ಕವ್ಯನಹಳ್ಳಿ	ಡಿಟೋ
ನಾಗನಹಳ್ಳಿ	ಡಿಟೋ
ಸಕ್ಕಳ್ಳಿ	ಡಿಟೋ
ವರುಣ	ಡಿಟೋ
ವೀರಪ್ಪನಹಳ್ಳಿ	ಡಿಟೋ
ವಾಜವಾಂಗಲ	ಡಿಟೋ
ಸಾಲಹುಂಡಿ	ಡಿಟೋ
ಹೊಸಹುಂಡಿ	ಡಿಟೋ
ಕಂಡಿ ಮಾದಯನ ಹುಂಡಿ	ಡಿಟೋ
ಮೈಸೂರು ತಾಲ್ಲೂಕು	ಡಿಟೋ
ಹೆಬ್ಬಾಳು	ಎಡತೊರೆ
ಸಿದ್ದನಕೊಪ್ಪಲು	ಡಿಟೋ
ಬ್ಯಾಡರಹಳ್ಳಿ	ಡಿಟೋ
ಬಾಚಹಳ್ಳಿ	ಡಿಟೋ
ಮುದ್ದನಹಳ್ಳಿ	ಡಿಟೋ
ಅರಸಿನಕೆರೆ	ಡಿಟೋ
ಚಂದಗಾಲ	ಡಿಟೋ
ತಾಂಡ್ಯ	ನಂಜನಗೂಡು
ಈಚಗಲ್ಲಿ	ಡಿಟೋ
ವಳಗೆರೆ	ಡಿಟೋ
ಇಜ್ಜಾಲ	ಡಿಟೋ
ಉದ್ಬಳಿಗರಹುಂಡಿ	ಡಿಟೋ
ಬಿಲ್ಲಗೆರೆ	ಡಿಟೋ

ತಾರೀಖು 16ನೆ ಜುಲೈ 1907.

ನಂ. 542—ಸ್ಯಾನಿಟೆರಿ 18-07—2, ಹಾಸನದ ಡಿಸ್ಟ್ರಿಕ್ಟ್ಕ ಅರಸಿಕೆರೆ ತಾಲ್ಲೂಕಿನ ಮಳಕಲ್ಲು ತಿರುಪತಿ ಗ್ರಾಮಕ್ಕೆ ಶ್ರೀ ವೆಂಕಟರಮಣ ಸ್ವಾಮಿ ರಥೋತ್ಸವ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶ ಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮದ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ —

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮದ್ ಮಹಾರಾಜರವರ ಸರ್ಕಾರದವರು 1907ನೆಯ ವರ್ಷದ ಜುಲೈ 16ನೆ ತಾರೀಖಿನಿಂದ 1907ನೆ ಇಸವಿ ಜುಲೈ 28ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಹಾರ್ನಾಮೆಗೆ ವಿರೋಧವಾಗಿ ಮೇಲ್ಕಂಡ ರಥೋತ್ಸವಕ್ಕೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.